## ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.
## ಸಿ.ಸಿ ನಂಃ **963/ 2019**

| | | |
|---|---|---|
| ಸಾಕ್ಷಿಯ ಹೆಸರುಃ | ಶ್ರೀ ಶಿವಶರಣಪ್ಪ | ಫ್ರಾಸಾಃ 03 |
| ತಂದೆ ಹೆಸರುಃ | ಸಂಗಣ್ಣ | ಚಾಸಾಃ 04 |
| ವಯಸ್ಸುಃ | 35 ವರ್ಷ | ದಿಃ 16-02-2026 |
| ಉದ್ಯೋಗಃ | ಅಬಕಾರಿ ಪೇದೆ<br>ಯಾದಗಿರಿ ವಲಯ | ಸಾಕ್ಷಿದಾರರಿಗೆ ಪ್ರಮಾಣ<br>ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಯಾದಗಿರಿ | |

<u>ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ನಾನು ಜೂನ್ 2018 ರಿಂದ ಆಗಸ್ಟ್ 2025 ವರೆಗೆ ಯಾದಗಿರಿಯ ಅಬಕಾರಿ ವಲಯದಲ್ಲಿ ಅಬಕಾರಿ ರಕ್ಷಕನಾಗಿ ಸೇವೆ ಸಲ್ಲಿಸಿದ್ದೇನೆ.

ನಾನು ದಿನಾಂಕ 04.05.2019 ರಂದು ಈ ಪ್ರಕರಣದ ಮಾದರಿ ಮು.ಮಾಲನ್ನು ರಾಸಾಯನಿಕ ಪರೀಕ್ಷೆಗಾಗಿ ರಾಯಚೂರಿನ ಫ್ರಾದೇಶಿಕ ರಾಸಾಯನಿಕ ಪರೀಕ್ಷಾ ಕೇಂದ್ರಕ್ಕೆ ತೆಗೆದುಕೊಂಡು ಹೋಗಿ ಒಪ್ಪಿಸಿ, ದಿಃ 22.05.2019 ರಂದು ವರದಿ ಪಡೆದುಕೊಂಡು ಕಚೇರಿಗೆ ತಂದು ಒಪ್ಪಿಸಿರುತ್ತೇನೆ.

ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ 1 ಮತ್ತು 2 ರಲ್ಲಿನ ಖಾಲಿ ಪ್ಲಾಸ್ಟಿಕ್ ಬಾಟಲಿ ಹಾಗೂ ಖಾಲಿ ಬಿಯರ್ ಬಾಟಲಿಗಳನ್ನು ನೋಡಿ ಅವುಗಳು ಮಾದರಿ ಬಾಟಲಿಗಳು ಆಗಿರುತ್ತವೆ ಎಂದು ನುಡಿದಿರುತ್ತಾರೆ.

ದಿನಾಂಕ 04.05.2019 ರ ನಿವೇದನೆ ಪತ್ರವನ್ನು ನಿಪಿ-2 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ವಿ.ಎಸ್.ಪಿ ವಕೀಲರಿಂದಃ</u>

ತನಿಖಾಧಿಕಾರಿ ನನ್ನ ಹೇಳಿಕೆ ಪಡೆದುಕೊಂಡಿಲ್ಲ. ನಾನು ದಿಃ 04.05.2019 ರಂದು ಮಾದರಿ ಮು.ಮಾಲನ್ನು ಪರೀಕ್ಷೆಗೆ ತೆಗೆದುಕೊಂಡು ಹೋಗಿದ್ದೆನು ಎಂದು ಮತ್ತು ದಿಃ 22.05.2019 ರಂದು ವರದಿ ಪಡೆದುಕೊಂಡು ಬಂದಿದ್ದೆನು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಪ್ರಕರಣದಲ್ಲಿ ಯಾವುದೇ ಕರ್ತವ್ಯ

ನಿರ್ವಹಿಸದೇ ಇದ್ದರೂ ಸಹ ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ